# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 210 |
| 2 | ಸದಸ್ಯರ ಹೆಸರು | : | ಶ್ರೀ ಹೆಚ್.ಎಂ. ರೇವಣ್ಣ |
| 3 | ಉತ್ತರಿಸುವ ದಿನಾಂಕ | : | 19-07-2019 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಪಶ್ಚಿಮ ಕಾರ್ಡ್ ರಸ್ತೆಯಲ್ಲಿ ಸಿಗ್ನಲ್ ಮುಕ್ತ ರಸ್ತೆಗಾಗಿ ಫ್ಲೈ ಓವರ್ ಕಾಮಗಾರಿಯು ಪ್ರಾರಂಭವಾಗಿ ಕಾಮಗಾರಿ ಪೂರ್ಣಗೊಳ್ಳದೆ ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪಶ್ಚಿಮ ಕಾರ್ಡ್ ರಸ್ತೆಯಲ್ಲಿ ಮಂಜುನಾಥ ನಗರ 1ನೇ ಮುಖ್ಯ ರಸ್ತೆಯಲ್ಲಿ ದ್ವಿಮುಖ ಸಂಚಾರದ ಮೇಲು ಸೇತುವೆ, ಶಿವನಗರ 1ನೇ ಮತ್ತು 8ನೇ ಮುಖ್ಯರಸ್ತೆಯ ಕೂಡು ಸ್ಥಳಗಳಲ್ಲಿ ಇಂಟಿಗ್ರೇಟೆಡ್ ಕೆಳ ಸೇತುವೆ ಮತ್ತು ಬಸವೇಶ್ವರ ನಗರ ಮುಖ್ಯರಸ್ತೆ ಕೂಡು ಸ್ಥಳಗಳಲ್ಲಿ ಏಕ ಮುಖ ಸಂಚಾರದ ಮೇಲು ಸೇತುವೆಗೆ ಕಾಮಗಾರಿಯನ್ನು ನಿರ್ವಹಿಸಲು ಮೆ\|\| ವೆಂಕಟರಾವ್ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ರವರಿಗೆ ದಿನಾಂಕ: 14-03-2016 ರಂದು ಕೆಲಸದ ಆದೇಶವನ್ನು ನೀಡಲಾಗಿರುತ್ತದೆ.<br><br>ಈ ಪೈಕಿ ಮಂಜುನಾಥನಗರ ಮುಖ್ಯ ರಸ್ತೆಯ ಮೇಲು ಸೇತುವೆಯನ್ನು ಪೂರ್ಣಗೊಳಿಸಿ ದಿನಾಂಕ: 27-08-2018 ರಂದು ಸಾರ್ವಜನಿಕ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ, ಶಿವನಗರ 1ನೇ ಮುಖ್ಯರಸ್ತೆ ಮತ್ತು 8ನೇ ಮುಖ್ಯರಸ್ತೆ ಕೂಡುವ ಸ್ಥಳದಲ್ಲಿ ಅಂಡರ್ ಪಾಸ್ ನಿರ್ಮಾಣಕ್ಕೆ ಸಾರ್ವಜನಿಕರಿಂದ ಈ ಕೆಳಕಂಡ ಅಂಶಗಳಿಗೆ ವಿರೋಧ ವ್ಯಕ್ತವಾಗಿರುತ್ತದೆ.<br><br>1. ಸುಮಾರು 48 ಹಳೆಯ ಮತ್ತು ಬೃಹತ್ ಮರಗಳನ್ನು ತೆರವುಗೊಳಿಸಬೇಕಾಗಿರುತ್ತದೆ.<br><br>2. ಅಂಡರ್‌ಪಾಸ್ ನಿರ್ಮಾಣ ಮಾಡುವ ಸ್ಥಳದಲ್ಲಿ ಪ್ರಮುಖ ಎಂ.ಆರ್.ಎಸ್.ಗ್ರಿಡ್ ಘಟಕವಿದ್ದು, ಕೆ.ಪಿ.ಟಿ.ಸಿ.ಎಲ್ ಸಂಸ್ಥೆಯ 66 ಕೆ.ವಿ ಮತ್ತು 11 ಕೆ.ವಿ ಕೇಬಲ್‌ಗಳನ್ನು ಸ್ಥಳಾಂತರಿಸಬೇಕಿರುತ್ತದೆ. |

| | | |
|---|---|---|
| | | 3. ಶಿವನಗರ 8ನೇ ಮುಖ್ಯ ರಸ್ತೆಯ ಜಂಕ್ಷನ್‌ನಲ್ಲಿ ಅನ್ನಪೂರ್ಣೇಶ್ವರಿ ಮತ್ತು ಗಣಪತಿ ದೇವಾಲಯವನ್ನು ತೆರವುಗೊಳಿಸಬೇಕಾಗಿದ್ದು, ದೇವಾಲಯವನ್ನು ತೆರವುಗೊಳಿಸುವುದು ಸ್ಥಳೀಯ ನಾಗರಿಕರ ಭಾವನಾತ್ಮಕ ವಿಷಯವಾಗಿರುತ್ತದೆ.<br><br>ಈ ಹಿನ್ನೆಲೆಯಲ್ಲಿ ಶಿವನಗರ 1ನೇ ಮುಖ್ಯರಸ್ತೆ ಮತ್ತು 8ನೇ ಮುಖ್ಯರಸ್ತೆ ಕೂಡುವ ಸ್ಥಳದಲ್ಲಿ ಅಂಡರ್ ಪಾಸ್ ಬದಲಿಗೆ ಇಂಟಿಗ್ರೇಟೆಡ್ ಮೇಲ್ಸೇತುವೆ ನಿರ್ಮಾಣ ಮಾಡಲು ದಿನಾಂಕ: 24-03-2018 ರಂದು ಸರ್ಕಾರ ಅನುಮೋದಿಸಿರುತ್ತದೆ ಹಾಗೂ ಕಾಮಗಾರಿಯನ್ನು ದಿನಾಂಕ: 01-05-2018 ರಂದು ಪ್ರಾರಂಭಿಸಲಾಗಿರುತ್ತದೆ. ಈ ಯೋಜನೆಯನ್ನು ಅಕ್ಟೋಬರ್ 2019ಕ್ಕೆ ಪೂರ್ಣಗೊಳಿಸಲಾಗುವುದು.<br><br>ಬಸವೇಶ್ವರ ನಗರ ಮುಖ್ಯರಸ್ತೆ ಕೂಡು ಸ್ಥಳಗಳಲ್ಲಿ ಏಕ ಮುಖ ಸಂಚಾರದ ಮೇಲು ಸೇತುವೆಗೆ ಕಾಮಗಾರಿಯು ಭಾಗಶಃ ಪೂರ್ಣಗೊಂಡಿದ್ದು, ಮಾಗಡಿ ರಸ್ತೆಯ ಕಡೆಗೆ ರಾಂಪ್ ಕಾಮಗಾರಿಯನ್ನು ನಿರ್ವಹಿಸಬೇಕಾಗಿರುತ್ತದೆ. ಆದರೆ 72ನೇ ಕ್ರಾಸ್ ರಾಜಾಜಿನಗರ ಇಂಡಸ್ಟ್ರೀಯಲ್ ಜಂಕ್ಷನ್‌ನಲ್ಲಿ ಹೊಸದಾಗಿ ಮೇಲ್ಸೇತುವೆಯನ್ನು ನಿರ್ಮಿಸಲು ಪ್ರಸ್ತಾಪಿಸಿದ್ದು, ಸದರಿ ಪ್ರಸ್ತಾವನೆಯಲ್ಲಿರುವ ಮೇಲ್ಸೇತುವೆಯನ್ನು ಹಾಲೀ ನಿರ್ಮಾಣವಾಗುತ್ತಿರುವ ಬಸವೇಶ್ವರನಗರ ಮೇಲ್ಸೇತುವೆಗೆ ಇಂಟಿಗ್ರೇಟೆ ಮಾಡಬೇಕಾಗಿರುತ್ತದೆ. ಸದರಿ ಪ್ರಸ್ತಾವನೆಗೆ ಸರ್ಕಾರವು ಒಪ್ಪಿಗೆಯನ್ನು ಸೂಚಿಸಿದ್ದು, ಅಂದಾಜುಪಟ್ಟಿಯನ್ನು ತಯಾರಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಿದ್ದು ಪರಿಶೀಲನೆಯಲ್ಲಿದೆ. |

...3.

| | | |
|---|---|---|
| ಆ) | ಕಾಮಗಾರಿಗೆ ತಗಲುವ ಅಂದಾಜು ವೆಚ್ಚವೆಷ್ಟು; ಹಾಗೂ ಕಾಲಾವಧಿ ಎಷ್ಟು; | ಮಂಜುನಾಥ ನಗರ ಮುಖ್ಯ ರಸ್ತೆ, ಶಿವನಗರ 1 ಮತ್ತು 8ನೇ ಮುಖ್ಯರಸ್ತೆ ಹಾಗೂ ಬಸವೇಶ್ವರನಗರ ಮುಖ್ಯರಸ್ತೆಯನ್ನೊಳಗೊಂಡ ಕೂಡು ಸ್ಥಳಗಳ ಅಭಿವೃದ್ಧಿಗೆ ತಗಲುವ ಅಂದಾಜು ಮೊತ್ತ ರೂ.112.07 ಕೋಟಿಗಳಾಗಿದ್ದು, ಈ ಯೋಜನೆಯನ್ನು ಅಕ್ಟೋಬರ್ 2019ಕ್ಕೆ ಪೂರ್ಣಗೊಳಿಸಲಾಗುತ್ತದೆ. (18 ತಿಂಗಳು) 72ನೇ ಅಡ್ಡರಸ್ತೆಯಲ್ಲಿ ದ್ವಿಮುಖ ಸಂಚಾರದ ಮೇಲು ಸೇತುವೆಗೆ ರೂ.32.00 ಕೋಟಿಗಳ ಮೊತ್ತಕ್ಕೆ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು ಪರಿಶೀಲನೆಯಲ್ಲಿದೆ. |
| ಇ) | ಸಾರ್ವಜನಿಕರ ಹಿತದೃಷ್ಟಿಯಿಂದ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ಸಾರ್ವಜನಿಕರ ಹಿತದೃಷ್ಟಿಯಿಂದ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ನಅಇ 67 ಎಂಎನ್‌ಯು 2019

**(ಜಿ. ಪರಮೇಶ್ವರ)**
ಉಪ ಮುಖ್ಯಮಂತ್ರಿಗಳು